ಅಧ್ಯಕ್ಷರು:-ಮಾನ್ಯ ವಿರೋಧ ಪಕ್ಷದ ನಾಯಕರು ಕೃಷ್ಣಾಜಲವಿವಾದ ನ್ಯಾಯಾಧಿಕರಣ ಮತ್ತು ಸಾಕಷ್ಟು ಆದೇಶದ ಪ್ರಕಾರ ನೀರಿನ ಉಪಯೋಗ ಮಾಡಿಕೊಂಡಿಲ್ಲ ಎಂಬ ಬಗ್ಗೆ ನಿಯಮ ೬೦ ರಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಿಯಮ ೬೦ರ ಕೆಳಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಈಗಾಗಲೇ ಇದನ್ನು ಗಮನಿಸಿ ಇದು ಇತ್ತೀಚಿನ ಘಟನೆಗೆ ಸಂಬಂಧಪಟ್ಟಂಥ ವಿಚಾರವಾಗದೆ ಅತ್ಯಂತ ಗಂಭೀರವಾದಂಥ ಮತ್ತು ಸಾರ್ವಜನಿಕ ಹಿತದೃಷ್ಟಿ ಇದರಲ್ಲಿ ಇರುವುದರಿಂದ ಇದನ್ನು ನಿಯಮ ೬೦ರ ಬದಲಾಗಿ ನಿಯಮ ೬೯ ರಡಿಯಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತಿದ್ದೇನೆ.ವಿರೋಧ ಪಕ್ಷದ ನಾಯಕರೆ ಚರ್ಚೆಯನ್ನು ಈಗಲೇ ಮಾಡುತ್ತೀರೋ ಅಥವಾ ನಾಳೆ ಮಾಡುತ್ತೀರೋ?

ಶ್ರೀ ಸಿದ್ದರಾಮಯ್ಯ:-ಮಾನ್ಯ ಅಧ್ಯಕ್ಷರೆ, ಇಷ್ಟೊಂದು ಕಠೋರ ಮಾತು-ಗಳಲ್ಲಿ ತಿರಸ್ಕಾರ ಮಾಡಿದರೆ ಹೇಗೆ? ನೀವು ಬಹಳ ನಿರಾಸೆ ಮಾಡಿಬಿಟ್ಟಿರಿ. ಬೆಳ-ಗಾಂನಲ್ಲಿ ಅಧಿವೇಶನ ನಡೆಯುವಾಗ ಇಷ್ಟೊಂದು ನಿರಾಸೆ ಮಾಡಿದರೆ ಹೇಗೆ?

ಅಧ್ಯಕ್ಷರು:-ಹಾಗೇನಿಲ್ಲ. ನಾಳೆ ಪ್ರಶ್ನೋತ್ತರ ಮುಗಿದ ತಕ್ಷಣ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಸದನವನ್ನು ಮಧ್ಯಾಹ್ನ ೩.೦೦ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ ೨ ಗಂಟೆ ೧೫ ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ ೩.೦೦ಗಂಟೆ ಪುನರ್ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

(ಸಭೆಯು ಮಧ್ಯಾಹ್ನ ೩.೨೧ಕ್ಕೆ ಸಮಾವೇಶಗೊಂಡಿತು)
(ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು)

5.ಪ್ರಶ್ನೋತ್ತರ

ಅ) ಚುಕ್ಕೆಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ 46 (547)